**ಕರ್ನಾಟಕ ಸರ್ಕಾರ**

**ಸಮಾಜ ಕಲ್ಯಾಣ ಇಲಾಖೆ**

ಸಂಖ್ಯೆ:ಸಕಇ/ಪಪೂತಕೇ/ಸಿಆರ್-13/ JEE- NEET/2years/2019-20.

ಆಯುಕ್ತರ ಕಛೇರಿ,
ಸಮಾಜ ಕಲ್ಯಾಣ ಇಲಾಖೆ,
ಬಹುಮಹಡಿಗಳ ಕಟ್ಟಡ, ಬೆಂಗಳೂರು,
ದಿನಾಂಕ:02.11.2019.

# ಅಧಿಸೂಚನೆ

ವಿಷಯ: 2019-20ನೇ ಸಾಲಿನಲ್ಲಿ 1000 ಪ.ಜಾತಿ ಮತ್ತು 400 ಪ.ವರ್ಗದ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಮೂಲಕ ವಿದೇಶಿ ವಿಶ್ವ ವಿದ್ಯಾಲಯದಲ್ಲಿ ಉನ್ನತ ವ್ಯಾಸಂಗಕ್ಕೆ ಅಗತ್ಯವಾಗಿರುವ ಸಾಮಾನ್ಯ ಅರ್ಹತಾ ಪ್ರವೇಶ ಪರೀಕ್ಷೆಗಳಾದ GRE/GMAT/SAT ಪರೀಕ್ಷೆಗಳಿಗೆ ತರಬೇತಿಯನ್ನು ನೀಡಲು ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ ಸಕಇ/101/ಪಕವಿ/2019 ದಿನಾಂಕ: 30-9-2019.
2. ಈ ಕಾರ್ಯಾಲಯದ ಪ್ರಕಟಣೆ ದಿನಾಂಕ: 02-11-2019.

****

*-*-*

ಉಲ್ಲೇಖ (1)ರ ಆದೇಶದಲ್ಲಿ ಸರ್ಕಾರವು ಪರೀಕ್ಷಾ ಪೂರ್ವ ತರಬೇತಿ ನೀತಿ-2019 ಅನ್ನು ಅನುಮೋದಿಸಿ, ಸದರಿ ನೀತಿಯನ್ನು ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಮೂಲಕ ಅನುಷ್ಟಾನ ಗೊಳಸಲು ಆದೇಶಿಸಿದೆ. ಸದರಿ ಕಾರ್ಯನೀತಿಯನ್ವಯ 2019-20ನೇ ಸಾಲಿನಲ್ಲಿ 1000 ಪ.ಜಾತಿ ಮತ್ತು 400 ಪ.ವರ್ಗದ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಮೂಲಕ ವಿದೇಶಿ ವಿಶ್ವ ವಿದ್ಯಾಲಯದಲ್ಲಿ ಉನ್ನತ ವ್ಯಾಸಂಗಕ್ಕೆ ಅಗತ್ಯವಾಗಿರುವ ಸಾಮಾನ್ಯ ಅರ್ಹತಾ ಪ್ರವೇಶ ಪರೀಕ್ಷೆಗಳಾದ GRE/GMAT/SAT ಪರೀಕ್ಷೆಗಳಿಗೆ ತರಬೇತಿಯನ್ನು ಉಚಿತವಾಗಿ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದಿಂದ ನೀಡಲು ಉದ್ದೇಶಿಸಿದ್ದು, ಈ ಬಗ್ಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

Scanned by CamScanner

**ಪ್ರತಿಷ್ಠಿತ ವಿದೇಶಿ ವಿಶ್ವ ವಿದ್ಯಾಲಯದಲ್ಲಿ ಉನ್ನತ ವ್ಯಾಸಂಗಕ್ಕೆ ಪ್ರವೇಶ ಪಡೆಯಲು ಅವಶ್ಯವಿರುವ ವಿವಿಧ ಅರ್ಹತಾ ಪ್ರವೇಶ ಪರೀಕ್ಷೆಗಳಾದ GRE/GMAT/SAT ಪರೀಕ್ಷೆಗಳಲ್ಲಿ ತೇರ್ಗಡೆಯಾಗಲು ಅನುಕೂಲವಾಗುವಂತೆ ಪೂರ್ವಭಾವಿ ತರಬೇತಿಗೆ ನಿಗಧಿಪಡಿಸಿದ ಶೈಕ್ಷಣಿಕ ವಿದ್ಯಾರ್ಹತೆ, ಅರ್ಜಿ ಸಲ್ಲಿಸಬೇಕಾದ ವೆಬ್‌ಸೈಟ್ ವಿಳಾಸ ಮತ್ತು ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದ ವಿವರಗಳು ಈ ಕೆಳಕಂಡಂತಿದೆ**

| ಕ್ರ.ಸಂ | | ವಿವರಗಳು |
|---|---|---|
| 01 | ಕೋರ್ಸ್‌ನ ವಿವರ | ವಿದೇಶಿ ವಿಶ್ವ ವಿದ್ಯಾಲಯದಲ್ಲಿ ಉನ್ನತ ವ್ಯಾಸಂಗಕ್ಕೆ ಅಗತ್ಯವಾಗಿರುವ ಸಾಮಾನ್ಯ ಅರ್ಹತಾ ಪ್ರವೇಶ ಪರೀಕ್ಷೆಗಳಾದ GRE/GMAT/SAT ಪರೀಕ್ಷೆಗಳಿಗೆ ತರಬೇತಿ |
| 02 | ತರಬೇತಿ ಅವಧಿ | • SAT – 2 ತಿಂಗಳು ಕನಿಷ್ಠ 50 ದಿನಗಳು ಕನಿಷ್ಠ 250 ರಿಂದ 280 ಗಂಟೆಗಳು.<br>• GRE - 2 ತಿಂಗಳು ಕನಿಷ್ಠ 50 ದಿನಗಳು ಕನಿಷ್ಠ 250 ರಿಂದ 280 ಗಂಟೆಗಳು.<br>• GMAT- 2 ತಿಂಗಳು ಕನಿಷ್ಠ 50 ದಿನಗಳು ಕನಿಷ್ಠ 250 ರಿಂದ 280 ಗಂಟೆಗಳು. |
| 03 | ವಯೋಮಿತಿ | 18 ರಿಂದ 40 ವರ್ಷಗಳು |
| 04 | ವಿದ್ಯಾರ್ಹತೆ | • SAT- ದ್ವಿತೀಯ ಪಿ.ಯು.ಸಿ/ಡಿಪ್ಲೊಮಾ ವಿಷಯದಲ್ಲಿ ಶೇ.80 ಕ್ಕಿಂತ ಹೆಚ್ಚು ಅಂಕಗಳಿಸಿರುವ ಎಲ್ಲಾ ಅಭ್ಯರ್ಥಿಗಳಿಗೆ.<br>• GRE – ಇಂಜಿನಿಯರಿಂಗ್, ಸಮಾಜ ವಿಜ್ಞಾನ ವಿಭಾಗ, ವಾಣಿಜ್ಯ ವಿಭಾಗ, ಕಾನೂನು ಮೊದಲಾದ ದವಿಯಲ್ಲಿ ಶೇ.55 ಕ್ಕಿಂತ ಹೆಚ್ಚು ಅಂಕಗಳಿಸಿದ ಅಭ್ಯರ್ಥಿಗಳಿಗೆ.<br>• GMAT-ಮ್ಯಾನೇಜ್ಮೆಂಟ್ ವಿಷಯದಲ್ಲಿ ತರಬೇತಿ ಪಡೆಯಲು ಉದ್ದೇಶಿಸಿರುವ ಅಭ್ಯರ್ಥಿಗಳು ಪದವಿಯಲ್ಲಿ ಶೇ.55 ಕ್ಕಿಂತ ಹೆಚ್ಚು ಅಂಕ ಗಳಿಸಿದ ಅಭ್ಯರ್ಥಿಗಳಿಗೆ. |
| 05 | ಅಭ್ಯರ್ಥಿಯ ಸಾಮಾನ್ಯ ಅರ್ಹತೆ | • ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.<br>• ಕರ್ನಾಟಕ ರಾಜ್ಯದ ಅನುಸೂಚಿತ ಜಾತಿ ಮತ್ತು ಅನುಸೂಚಿತ ವರ್ಗಕ್ಕೆ ಸೇರಿದ ಜಾತಿಪಟ್ಟಿಯಲ್ಲಿರುವ ಜಾತಿಗೆ ಸೇರಿರತಕ್ಕದ್ದು.<br>• ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಹೊಂದಿರತಕ್ಕದ್ದು.<br>• ದೈಹಿಕ ಅಂಗವಿಕಲ ಮೀಸಲಾತಿಯಡಿ ಅರ್ಜಿ ಸಲ್ಲಿಸುವ ಅಭ್ಯರ್ಥಿ, ನಿಗಧಿತ ಪ್ರಾಧಿಕಾರದಿಂದ ನಿಗದಿಪಡಿಸಲಾದ ಕೊನೆಯ ದಿನಾಂಕದೊಳಗೆ ಅಂಗವಿಕಲ ಪ್ರಮಾಣ ಪತ್ರ ಪಡೆದಿರಬೇಕು. |

Scanned by CamScanner

| | | |
|---|---|---|
| 06 | ಷರತ್ತು | • ತರಬೇತಿ ವೆಚ್ಚದಲ್ಲಿ ಭೋದನಾ ವೆಚ್ಚ, ಸ್ಟಡಿ ಮೇಟಿರಿಯಲ್, ಲೇಖನಾ ಸಾಮಾಗ್ರಿ ಮತ್ತು ಇತರೆ ಎಲ್ಲಾ ತೆರಿಗೆ ಒಳಗೊಂಡಿರುತ್ತದೆ.<br>• GRE/GMAT/SAT ಪರೀಕ್ಷೆಗಳಿಗೆ ನಿಗಧಿಪಡಿಸಿದ ಪೂರ್ಣ ಪಠ್ಯ ಕ್ರಮದ ತರಬೇತಿ ನೀಡುವುದು.<br>• ದ್ವಿತೀಯ ಪಿ.ಯು.ಸಿ / ಡಿಪ್ಲೊಮಾ ಸ್ಥೆರಿದಂತೆ ಯಾವುದೇ ಪದವಿಯಲ್ಲಿ ಗಳಿಸಿದ ಅಂಕದ (ಮೆರಿಟ್) ಆಧಾರದ ಮೇಲೆ ನಿಗದಿತ ಗುರಿಗನುಗುಣವಾಗಿ ಅಭ್ಯರ್ಥಿಗಳನ್ನು SAT ಅರ್ಹತಾ ಪರೀಕ್ಷೆಗೆ ಆಯ್ಕೆ ಮಾಡಲಾಗುವುದು.<br>• ಪದವಿಯಲ್ಲಿ ಗಳಿಸಿದ ಅಂಕದ (ಮೆರಿಟ್) ಆಧಾರದ ಮೇಲೆ ನಿಗದಿತ ಗುರಿಗನುಗುಣವಾಗಿ ಅಭ್ಯರ್ಥಿಗಳನ್ನು GRE/GMAT ಅರ್ಹತಾ ಪರೀಕ್ಷೆಗೆ ಆಯ್ಕೆ ಮಾಡಲಾಗುವುದು. |
| 07 | ಮೀಸಲಾತಿ | • ಮಹಿಳಾ ಅಭ್ಯರ್ಥಿಗಳಿಗೆ 33%, ದಿವ್ಯಾಂಗ ಅಭ್ಯರ್ಥಿಗಳಿಗೆ 04%, ಹಾಸ್ಟೆಲ್ ವಿದ್ಯಾರ್ಥಿಗಳಿಗೆ 10%, ವಸತಿ ಶಾಲೆ ವಿದ್ಯಾರ್ಥಿಗಳಿಗೆ 10%, ಅಲೆಮಾರಿ ಸಮುದಾಯ/ ಸಫಾಯಿ ಕರ್ಮಚಾರಿಗಳ ಮಕ್ಕಳಿಗೆ 05% ರಷ್ಟು ಸ್ಥಾನಗಳನ್ನು ಹಂಚಿಕೆ ಮಾಡಲಾಗುವುದು.<br>• ನಿಗಧಿತ ಸಂಖ್ಯೆಯಲ್ಲಿ ಮಹಿಳಾ ಅಭ್ಯರ್ಥಿಗಳು/ದಿವ್ಯಾಂಗ/ಹಾಸ್ಟೆಲ್/ವಸತಿ ಶಾಲೆ ವಿದ್ಯಾರ್ಥಿಗಳು/ಅಲೆಮಾರಿ ಸಮುದಾಯದ/ ಸಫಾಯಿ ಕರ್ಮಚಾರಿ ಮಕ್ಕಳು ದೊರೆಯದಿದ್ದಲ್ಲಿ ಇತರೆ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸುವುದು. |
| 08 | ವಾರ್ಷಿಕ ಆದಾಯ | • ಅಭ್ಯರ್ಥಿಯ ಕುಟುಂಬದ ವಾರ್ಷಿಕ ಆದಾಯ ಆದಾಯ ಎಲ್ಲಾ ಮೂಲಗಳಿಂದ ರೂ.05.00 ಲಕ್ಷಗಳ ಒಳಗಿರತಕ್ಕದ್ದು. |
| 09 | ಅರ್ಜಿ ನಮೂನೆ ದೊರೆಯುವ ವೆಬ್‌ಸೈಟ್ ವಿಳಾಸ | **www.sw.kar.nic.in** |

Scanned by CamScanner

<table>
<tr>
<td>10</td>
<td>ಶಿಷ್ಯ ವೇತನ</td>
<td>

- ಶಿಷ್ಯವೇತನ ಪಾವತಿಸುವ ವಿದ್ಯಾರ್ಥಿಗಳ ಬಯೋಮೆಟ್ರಿಕ್ ಹಾಜರಾತಿಯನ್ನು ಪರಿಗಣಿಸುವುದು.
- ಪ್ರತಿ ಮಾಹೆಯಲ್ಲಿ 2 ದಿನಕ್ಕಿಂತ ಹೆಚ್ಚು ಗೈರು ಹಾಜರಾತಿ ಹೊಂದಿದ್ದರೆ, ಶಿಷ್ಯವೇತನವನ್ನು ದಿನದ ಲೆಕ್ಕದಲ್ಲಿ ಕಡಿತಗೊಳಿಸುವುದು.
- ಒಂದು ತಿಂಗಳಲ್ಲಿ 15 ದಿನಕ್ಕಿಂತ ಹೆಚ್ಚು ಗೈರು ಹಾಜರಾತಿ ಹೊಂದಿದರೆ ಶಿಷ್ಯವೇತನವನ್ನು ಪಾವತಿಸುವಂತಿಲ್ಲ.
- ಇಲಾಖೆವತಿಯಿಂದ ವಸತಿ ಸಹಿತ ತರಬೇತಿಯನ್ನ ನೀಡುವ ಉದ್ದೇಶ ಹೊಂದಿದ್ದರೆ, ಶಿಷ್ಯವೇತನದ ಶೇ.80% ರಷ್ಟು ಮೊತ್ತವನ್ನು ಊಟ ವಸತಿಗೆ ಕಡಿತಗೊಳಿಸಬೇಕು ಮತ್ತು ಅದನ್ನು ನಿರ್ವಹಣಾ ವೆಚ್ಚಕ್ಕಾಗಿ ಬಳಸುವುದು.
- ತರಬೇತಿ ಸಚಿದರ್ಭದಲ್ಲಿ ಊಟ-ವಸತಿ ಸೌಲಭ್ಯ ಕಲ್ಪಿಸಿದ್ದು, ಅಭ್ಯರ್ಥಿ ಊಟ-ವಸತಿ ಸೌಲಭ್ಯ ನಿರಾಕರಿಸಿದರೆ ಅಂತಹ ಅಭ್ಯರ್ಥಿಯ ಶೇ.80% ರಷ್ಟು ಶಿಷ್ಯ ವೇತನವನ್ನು ಕಡಿತಗೊಳಿಸಬೇಕು, ಉಳಿದ ಶೇ.20% ರಷ್ಟು ಶಿಷ್ಯವೇತನವನ್ನು ಮಾತ್ರ ಅಭ್ಯರ್ಥಿಯ ಬ್ಯಾಂಕ್ ಖಾತೆಗೆ ಪಾವತಿಸುವುದು.
- ರಾಜ್ಯ ಉನ್ನತ ಮಟ್ಟದ ಸಮಿತಿ ಶಿಷ್ಯವೇತನ ಹೆಚ್ಚಿಸುವ. ಕಡಿತಗೊಳಿಸುವ, ರದ್ದುಗೊಳಿಸುವ ಅಧಿಕಾರ ಹೊಂದಿರುತ್ತದೆ.
- ಶಿಷ್ಯವೇತನ

<table>
<tr><th>ಕ್ರ.ಸಂ</th><th>ತರಬೇತಿ</th><th>ಸ್ಥಳ</th><th>ಪ್ರತಿ ತಿಂಗಳಿಗೆ</th></tr>
<tr><td>1</td><td>GRE</td><td rowspan="3">ಬೆಂಗಳೂರು<br>ಇತರೆ ನಗರ</td><td rowspan="3">3000<br>2000</td></tr>
<tr><td>2</td><td>GMAT</td></tr>
<tr><td>3</td><td>SAT</td></tr>
</table>

</td>
</tr>
<tr>
<td>11</td>
<td>ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ</td>
<td>23-11-2019 ಸಚಿಜೆ 5.30 ರವರೆಗೆ</td>
</tr>
<tr>
<td>12</td>
<td>ಅರ್ಜಿ ಕಳುಹಿಸುವ ಇ-ಮೇಲ್ ವಿಳಾಸ</td>
<td>sat.gre.gmat.petc@gmail.com</td>
</tr>
</table>

Scanned by CamScanner

ಅಭ್ಯರ್ಥಿಗಳು ನಿಗಧಿಪಡಿಸಿದ ಕೊನೆಯ ದಿನಾಂಕದೊಳಗೆ ನಿಗಧಿಪಡಿಸಿದ ಅರ್ಜಿ ನಮೂನೆಯಲ್ಲಿನ ಕಾಲಂಗಳನ್ನು ಭರ್ತಿ ಮಾಡಿ, ಸದರಿ ಅರ್ಜಿಯನ್ನು ಸ್ಕ್ಯಾನ್ ಮಾಡಿ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಇ–ಮೇಲ್ ವಿಳಾಸಕ್ಕೆ sat.gre.gmat.petc@gmail.com ಕ್ಕೆ ಕಳುಹಿಸಿವುದು.

**ಸೂಚನೆ:**

- ದೈಹಿಕ ಅಂಗವಿಕಲ ಮೀಸಲಾತಿಯಡಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಯು The right of person with disabilities act 2016,ರನ್ವಯ ಸಕ್ಷಮ ಪ್ರಾಧಿಕಾರದಿಂದ ನಿಗದಿಪಡಿಸಲಾದ ನಮೂನೆಯಲ್ಲಿ ದಿವ್ಯಾಂಗ ಪ್ರಮಾಣ ಪತ್ರವನ್ನು ಕೊನೆಯ ದಿನಾಂಕದೊಳಗೆ ಪಡೆದಿರಬೇಕು.

- ಹಾಸ್ಟೆಲ್ ವಿದ್ಯಾರ್ಥಿಗಳ ಕೋಟಾದಲ್ಲಿ ಆಯ್ಕೆ ಹೊಂದಲು ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹಾಗೂ ವಸತಿ/ಆಶ್ರಮ ಶಾಲೆಯಲ್ಲಿ ಕನಿಷ್ಠ ಮೂರು ವರ್ಷ ನಿಲಯಾರ್ಥಿಗಳಾಗಿದ್ದ ಬಗ್ಗೆ ಸಂಬಂಧಪಟ್ಟ ವಾರ್ಡನ್/ನಿಲಯ ಮೇಲ್ವಿಚಾರಕರಿಂದ ದೃಢೀಕರಣ ಪತ್ರವನ್ನು ಸಲ್ಲಿಸುವುದು.

- ವಸತಿ ಶಾಲೆ ವಿದ್ಯಾರ್ಥಿಗಳ ಕೋಟಾದಲ್ಲಿ ಆಯ್ಕೆ ಹೊಂದಲು ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಅಲ್ಪ ಸಂಖ್ಯಾತರ ಇಲಾಖೆಯಡಿ ಬರುವ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಅಂಬೇಡ್ಕರ್ ವಸತಿ ಶಾಲೆಯಲ್ಲಿ ಕನಿಷ್ಟ 05 ವರ್ಷ ವಿದ್ಯಾಭ್ಯಾಸ ಮಾಡಿದ ಅಭ್ಯರ್ಥಿಗಳು ದೃಡೀಕರಣ ಪತ್ರವನ್ನು ನಿಲಯ ಮೇಲ್ವಿಚಾರಕರು ಮತ್ತು ಪ್ರಾಂಶುಪಾಲರಿಂದ ಪಡೆದು ಸಲ್ಲಿಸುವುದು.

- ಅಲೆಮಾರಿ ಸಮುದಾಯ/ಸಫಾಯಿ ಕರ್ಮಚಾರಿಗಳ ಮಕ್ಕಳಿಗೆ ಸಂಬಂಧಿಸಿದಂತೆ ಸರ್ಕಾರ ಗುರುತಿಸಿರುವ ಜಾತಿಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಮಾತ್ರ.

Scanned by CamScanner

- ಅರ್ಜಿ ಸಲ್ಲಿಸುವಾಗ ನಿಗಧಿತ ನಮೂನೆಗೆ ಯಾವುದೇ ದಾಖಲೆಗಳನ್ನು ಲಗತ್ತಿಸುವ ಅಗತ್ಯವಿರುವುದಿಲ್ಲ. ಆಯ್ಕೆಯಾದ ಅಭ್ಯರ್ಥಿಗಳು ತರಬೇತಿಗೆ ಹಾಜರಾಗುವಾಗ ಈ ಮೇಲಿನ ಎಲ್ಲಾ ದಾಖಲೆಗಳ ಪ್ರತಿಯೊಂದಿಗೆ ಮೂಲ ದಾಖಲೆಗಳನ್ನು ಪರಿಶೀಲನೆಗೆ ನೀಡತಕ್ಕದ್ದು.

Rajus

ಆಯುಕ್ತರು,
ಸಮಾಜ ಕಲ್ಯಾಣ ಇಲಾಖೆ,
ಬೆಂಗಳೂರು.

<u>ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ:</u>

(1)ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು,ರವರಿಗೆ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.
(2)ಮುಖ್ಯ ಆಡಳಿತಾಧಿಕಾರಿಗಳು, ಪರೀಕ್ಷಾ ಪೂರ್ವ ತರಬೇತಿ8 ಕೇಂದ್ರ, ಬೆಂಗಳೂರು.
(3)ಸೂಚನಾ ಫಲಕ (4)ಪತ್ರಿಕಾ ಪ್ರಕಟಣೆ.

Scanned by CamScanner